ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ಉತ್ಪಾದನೆ ಮತ್ತು ಮಾರಾಟವಾದ ರೇಷ್ಮೆ ಬಟ್ಟೆಯ ಬಗ್ಗೆ.

೭೧೮. ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ರೇಷ್ಮೆ, ಪಶುಸಂಗೋಪನೆ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ೧೯೮೩, ೧೯೮೪ ಮತ್ತು ೧೯೮೫ನೇ ಸಾಲುಗಳಲ್ಲಿ ಉತ್ಪಾದನೆ ಆದ ರೇಷ್ಮೆ ಬಟ್ಟೆ ಎಷ್ಟು, ಆಯಾ ಸಾಲುಗಳಲ್ಲಿ ಮಾರಾಟವಾದ ರೇಷ್ಮೆ ಬಟ್ಟೆ ಎಷ್ಟು ಮತ್ತು ಉಳಿಕೆಯಾದ ದಾಸ್ತಾನು ಉಳಿಯಲು ಕಾರಣ ಏನು?

ಆ) ಈ ರೀತಿ ಹೆಚ್ಚು ರೇಷ್ಮೆ ಬಟ್ಟೆ ದಾಸ್ತಾನು ಉಳಿಯಲು ನೇಕಾರರಿಗೆ ಒದಗಿಸಂತ್ತಿರುವ ಕಳಪೆ ಮತ್ತು ಹಿಂಶ್ರ ರೇಷ್ಮೆವಾರ್ಪ ಮತ್ತು ವೆಫ್ಟ್ ಕಾರಣವೆಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಕೈಮಗ್ಗ ನೇಕಾರರಿಗೆ ರೇಷ್ಮೆವಾರ್ಪ್ ಮತ್ತು ವೆಫ್ಟ್‌ನ್ನು ೧೦–೧೫ ದಿನಗಳಿಗೊಮ್ಮೆ ಸರಬರಾಜು ಮಾಡುತ್ತಿರುವ ವಿಷಯ ಸರ್ಕಾರಕ್ಕೆ ತಿಳಿದಿದೆಯೆ, ಇದರಿಂದ ಕೆಲಸಗಾರರಿಗೆ ಸಾಕಷ್ಟು ಕೆಲಸ ದೊರೆಯದೆ ಅವರ ವರಮಾನ ಕಡಿಮೆ ಆಗುತ್ತಿದೆ ಎಂಬುದು ತಿಳಿದಿದೆಯೆ ;

ಈ) ಕೈಮಗ್ಗ ನೇಕಾರರಿಗೆ ಸಾಕಷ್ಟು ಕೆಲಸ ಒದಗಿಸಲು ಉತ್ತಮ ನೂಲನ್ನು ಸರಬರಾಜು ಮಾಡಲು ಏನು ವ್ಯವಸ್ಥೆ ಮಾಡಲಾಗಿದೆ.

ಉ) ನಿಗಮ ರೇಷ್ಮೆಯನ್ನು ಖಾಸಗಿಯವರಿಂದ ಪಡೆಯುತ್ತಿದೆ ಸರ್ಕಾರಿ ಕಾರ್ಖಾನೆಗಳಿಂದ ಪಡೆಯುತ್ತಿಲ್ಲ ಎಂಬ ವಿಷಯವು ಸರ್ಕಾರದವರ ಗಮನಕ್ಕೆ ಬಂದಿದೆಯೆ ; ಹಾಗಿದ್ದಲ್ಲಿ ಇದಕ್ಕೆ ಕಾರಣವೇನು ;

ಊ) ಸರ್ಕಾರಿ ಕಾರ್ಖಾನೆಗಳಿಂದ ನೂಲನ್ನು ಪಡೆದರೆ ಗುಣಮಟ್ಟ ಉತ್ತಮವಾಗಿರುವುದಿಲ್ಲ ಈ ಬಗ್ಗೆ ಇದನ್ನು ಸರಿಪಡಿಸಲು ಏನು ಕ್ರಮ ಕೈಗೊಂಡಿರುವಿರಿ?

ಶ್ರೀ ಜೆ. ಹೆಚ್. ಪಟೇಲ್, (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

(ಅ) ಕೈಮಗ್ಗ ಅಭಿವೃದ್ಧಿ ನಿಗಮವು ಈ ಕೆಳಕಂಡ ವರ್ಷಗಳಲ್ಲಿ ಮಾಡಿರುವ ರೇಷ್ಮೆ ಬಟ್ಟೆ ಉತ್ಪಾದನೆ ಮತ್ತು ಮಾರಾಟಗಳ ವಿವರ ಈ ರೀತಿ ಇದೆ.

ಉತ್ಪಾದನೆ

ವರ್ಷ	ಮೀ (ಲಕ್ಷಗಳಲ್ಲಿ)	ಮೊತ್ತ ರೂ. (ಲಕ್ಷಗಳಲ್ಲಿ)
೧೯೮೩—೮೪	೬.೨೪	೨೯೨.೯೭
೧೯೮೪—೮೫	೪.೯೮	೨೬೮.೧೨
೧೯೮೫—೮೬	೫.೪೯	೩೨೭.೦೮

ಮಾರಾಟ

ವರ್ಷ	ಮೊತ್ತ (ರೂ.ಲಕ್ಷಗಳಲ್ಲಿ)
೧೯೮೩–೮೪	೩೫೧.೩೭
೧೯೮೪–೮೫	೪೬೧.೫೧
೧೯೮೫–೮೬	೩೯೫.೯೭

ಹತ್ತಿ ಬಟ್ಟೆ ಮತ್ತು ರೇಷ್ಮೆ ಬಟ್ಟೆ ದಾಸ್ತಾನು ಅಂಕಿ ಅಂಶಗಳು ಒಟ್ಟಾಗಿ ಇದ್ದು ರೇಷ್ಮೆ ಬಟ್ಟೆಯ ದಾಸ್ತಾನಿನ ಅಂಕಿ ಅಂಶಗಳ ವಿವರ ಸದ್ಯದಲ್ಲಿ ಇಲ್ಲ.

ದಾಸ್ತಾನು ಉಳಿಯಲು ಕಾರಣಗಳು :

೧) ಕೈಮಗ್ಗ ಬಟ್ಟೆಯು ಹೆಚ್ಚಾಗಿ ರಿಬೇಟ್ ಕೊಟ್ಟ ದಿನಗಳಲ್ಲಿ ಮಾತ್ರ ಮಾರಾಟವಾಗುತ್ತಿದ್ದು ಉಳಿದ ದಿನಗಳಲ್ಲಿ ಮಾರಾಟ ತೀರ ಕಡಿಮೆಯಾಗಿರುತ್ತದೆ.

೨) ವಿದ್ಯುತ್ ಮಗ್ಗಗಳ ಮೇಲೆ ತಯಾರಾಗುವ ಬಟ್ಟೆಗಳ ಉತ್ಪಾದನಾ ವೆಚ್ಚ ಕೈಮಗ್ಗ ಬಟ್ಟೆಗಳ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆಯಿದ್ದು ತೀವ್ರ ಪೈಪೋಟಿ ಅನುಸರಿಸಬೇಕಾಗಿದೆ.

೩) ಕಳೆದ ಎರಡು ವರ್ಷಗಳಿಂದ ರೇಷ್ಮೆ ಬೆಲೆ ಹೆಚ್ಚಿರುವುದರಿಂದ ಬಟ್ಟೆಗಳ ಬೆಲೆಯೂ ಹೆಚ್ಚಿರುತ್ತದೆ.

೪) ಶುದ್ಧವಾದ ಜರಿಯನ್ನು ಉಪಯೋಗಿಸಿ ಸೀರೆಗಳನ್ನು ತಯಾರಿಸಂತ್ತಿರುವುದರಿಂದ ಕೈಮಗ್ಗದ ಸೀರೆಗಳ ಬೆಲೆ ವಿದ್ಯುತ್ ಮಗ್ಗಗಳ ಸೀರೆಗಳಿಗಿಂತ (ಬೆಲೆಯಲ್ಲಿ) ಸ್ವಲ್ಪ ಹೆಚ್ಚಾಗಿರುತ್ತದೆ.

೫) ಕಳಪೆ ರೇಷ್ಮೆಯನ್ನು ನೇಕಾರರಿಗೆ ನಿಗಮವು ಸರಬರಾಜು ಮಾಡುತ್ತಿಲ್ಲ ಮತ್ತು ಇದಿಂದ ದಾಸ್ತಾನು ಉಳಿದಿಲ್ಲ.

೬) ನಿಗಮವು ರೇಷ್ಮೆಯನ್ನು ಸಕಾಲದಲ್ಲಿ ಸರಬರಾಜು ಮಾಡಲು ಸೂಕ್ತ ವ್ಯವಸ್ಥೆ ಮಾಡಿದೆ.

೭) ನಿಗಮದ ನೇಕಾರರಿಗೆ ಉತ್ತಮ ದರ್ಜೆಯ ರೇಷ್ಮೆಯನ್ನು ಅವಶ್ಯಕತೆಗೆ ಬೇಕಾದಷ್ಟು ಸರಬರಾಜು ಮಾಡುತ್ತಿದೆ.

೮) ಬಂದಿದೆ. ನಿಗಮವು ರೇಷ್ಮೆಯನ್ನು ಸರ್ಕಾರಿ ವಲಯ ದಿಂದಲೇ ಕೊಳ್ಳಬೇಕೆಂಬುದು ಕಡ್ಡಾಯವಲ್ಲ. ನಿಗಮವು ಸರ್ಕಾರಿ ವಲಯ ಮತ್ತು ಇತರರಿಂದಲೂ ರೇಷ್ಮೆ ನೂಲನ್ನು ಕೊಳ್ಳಬಹುದು.

೯) ಉತ್ತಮ ಗುಣವಂಟ್ಟದ ರೇಷ್ಮೆಯನ್ನೇ ತೆಗೆದುಕೊಳ್ಳಲಾಗುತ್ತಿದ್ದೇವೆ.

ಹೊಸದುರ್ಗ ತಾಲ್ಲೂಕಿನಲ್ಲಿ ಸಸಿ ನೆಡುವ ಕಾರ್ಯದ ಬಗ್ಗೆ.

೬೮೧. ಶ್ರೀ ಜಿ. ರಾಮದಾಸ್ (ಹೊಸದುರ್ಗ) —ಮಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ಹೊಸದುರ್ಗ ತಾಲ್ಲೂಕಿನಲ್ಲಿ ವಲಯ ಹಾಗೂ ಸಾಮಾಜಿಕ ಅರಣ್ಯ ಇಲಾಖೆಯಿಂದ ಎಷ್ಟು ಲಕ್ಷ ಸಸಿಗಳನ್ನು ನೆಡಲು ಉದ್ದೇಶಿಸಲಾಗಿದೆ.

೨) ಈ ಯೋಜನೆಗಾಗಿ ಎಷ್ಟು ನರ್ಸರಿಗಳನ್ನು ತಾಲ್ಲೂಕಿನಲ್ಲಿ ಸ್ಥಾಪಿಸಲಾಗಿದೆ. ಇದರಲ್ಲಿ ಬೆಳೆಸಿದ ಗಿಡಗಳೆಷ್ಟು. ಇಲ್ಲಿ ಕೆಲಸ ಮಾಡುತ್ತಿರುವ ನೌಕರರು ಎಷ್ಟು ಜನರಿದ್ದಾರೆ ಇಲ್ಲಿ ಬೆಳೆದ ಗಿಡಗಳಲ್ಲಿ ಹೋಬಳಿವಾರು ಎಷ್ಟು ಗಿಡಗಳನ್ನು ವಿತರಣೆ ಮಾಡಲಾಗಿದೆ.

೩) ಇಲ್ಲಿನ ವನ ಮಹೋತ್ಸವದ ಅಂಗವಾಗಿ ಎಷ್ಟು ಗ್ರಾಮಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ!

೪) ಹಾಗಿದ್ದಲ್ಲಿ ಕಸಬಾ ಹೋಬಳಿ ಅರಳಿಹಳ್ಳಿ ಶಾಲಾ ಮೈದಾನದಲ್ಲಿ ಒಂದೂ ಸಾವಿರ ಗಂಧ ತೆಗೆದು ಸಸಿಗಳಿಗಾಗಿ ಕಾದರೂ ಗಿಡಗಳು ಸರಬರಾಜು ಮಾಡದೇ ಇರಲು ಕಾರಣವೇನು?

ಶ್ರೀ ಜೆ.ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

೧) ಹೊಸದುರ್ಗ ತಾಲ್ಲೂಕಿನಲ್ಲಿ ೧೯೮೬-೮೭ಕ್ಕೆ ಅರಣ್ಯ ಇಲಾಖೆಯಿಂದ ಪ್ರಾದೇಶಿಕ ವಲಯದಲ್ಲಿ ೫.೮೦,೦೦೦ ಸಸಿಗಳನ್ನು ಮತ್ತು ಸಾಮಾಜಿಕ ಅರಣ್ಯ ವಲಯದಲ್ಲಿ ೮,೧೫,೦೦೦ ಸಸಿಗಳನ್ನು ಬೆಳೆಸಲು ಯೋಜನೆ ಹಾಕಿಕೊಳ್ಳಲಾಗಿದೆ.

೨) ಅರಣ್ಯ ಇಲಾಖೆಯ ಮಂಜಿನಾಂತರ ಹೊಸದುರ್ಗ ತಾಲ್ಲೂಕಿನಲ್ಲಿ ಪ್ರಾದೇಶಿಕ ವಲಯದಿಂದ ೪ ಸರ್ಕಾರಿ ನರ್ಸರಿಗಳನ್ನು ಮತ್ತು ಸಾಮಾಜಿಕ ಅರಣ್ಯ ವಲಯದಿಂದ ೪ ಸರ್ಕಾರಿ ನರ್ಸರಿ ಮತ್ತು ೧೦ ಕಿಸಾನ್ ನರ್ಸರಿಯನ್ನು ಬೆಳೆಸಲಾಗಿದೆ.

ಪ್ರಾದೇಶಿಕ ವಲಯದಿಂದ ನಾಲ್ಕು ನರ್ಸರಿಯಲ್ಲಿ ೫,೮೦ ೦೦೦ ಸಸಿಗಳನ್ನು ಬೆಳೆಸಿದೆ. ಸಾಮಾಜಿಕ ಅರಣ್ಯ ವಲಯದಿಂದ ೧೪ ನರ್ಸರಿಗಳಲ್ಲಿ ೮,೧೨,೦೦೦ ಸಸಿಗಳನ್ನು ಬೆಳೆಸಲಾಗಿದೆ. ಈ ಸ್ಥ ಕ್ಷೇತ್ರದಲ್ಲಿ ೩೫ ಮಂತ್ರು ೩೮ ಜನರು ಕೆಲಸ ಮಾಡುತ್ತಿದ್ದಾರೆ.